ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
Karnataka State Rural Development and Panchayat Raj University
ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ– 582 101
Raitha Bhavana, General Cariappa Circle, Gadag – 582 101
E-mail: ksrdpru@gmail.com Phone: 08372-230338, Fax: 08372-297343

ದಿನಾಂಕ 26-06-2019 ಬುಧವಾರದಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದಲ್ಲಿ ಸಭಾ ಭವನದಲ್ಲಿ ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಪ್ರಥಮ ಸಭೆಯ ನಡವಳಿಗಳು

**PROCEEDINGS OF THE SECOND MEETING OF THE EXECUTIVE COUNCIL HELD ON 26-06-2019 IN THE MEETING HALL, KSRDPR UNIVERSITY, GADAG**

**MEMBERS PRESENT:**

1. Prof. Dr. B. Thimme Gowda
Vice Chancellor, KSRDPRU, — Chairman

2. Prof. Dr. R.S. Deshpande, — Member
Former Director, Institute for Social and Economic Change (ISEC),
No. 405, 5th Main, 10th Cross, Teachers' Colony,
Nagarabhavi, Bengaluru-72

3. Shri G. B. Shivaraj, — Member
Vice-President, Gandhi Bhavan,
#181, Lakshmi Nivas, 2nd B Main Road, 6th Cross,
9th Block, Nagarbhavi 2nd Stage, Bengaluru-72.

5. Shri B.G. Govindappa, Ex-MLA, — Member
Belaguru Village & Post,
Srirampura Hobli, Hosadugra – 577 527.

6. Shri Abdul Hakim, — Member
Social Worker, Educationist and Writer,
#3078, 1st Cross, Gayathrinagar, Bengaluru-21.

7. Prof. Dr. K.M. Hanumantharayappa, — Member
Principal & Dean, Faculty of Law (Retd.) and
Former Member, Karnataka State Law Commission,
presently residing in Guntur, A.P.

9. Smt. N. Jamuna Urs, — Member
Home Scientist (Retd.), J.S.S. KVK, Mysuru,
# 904/7, 3rd Main Road, 1st Cross,
Vidyaranyapuram, Mysuru-570 008.

10. Dr. N. Sivanna,
Director (I/c), Centre for Research, Innovation and
Evaluation, KSRDPR University, Gadag — Member

11. Dr. Prakash Bhat, — Member
Former C.E.O., Society for Community Participation and Empowerment (SCOPE), No.19, Bayalu, Hoysala Nagar, Haliyala Road, Dharwad-580 003.

12. Prof. Dr. Suresh V. Nadagoudar
Registrar, KSRDPR University, Gadag — Ex-officio Member Secretary

**MEMBERS NOT PRESENT:**

1. Dr. Arun R. Patil, Adhiti, Adhyapakara Nagara, Hulkoti-582 205.
2. Prof. T.V. Kattimani,
Vice Chancellor, Indira Gandhi National Tribal University,
Anuppur Dist. M.P.
3. The Vice Chancellor, UAS, Bengaluru
4. The Vice Chancellor, VTU, Belagavi.
5. The Principal Secretary to Government,
Rural Development and Panchayat Raj Department
Govt. of Karnataka, Bengaluru.
6. The Principal Secretary to Government,
Department of Agriculture, Govt. of Karnataka, Bengaluru.
7. The Principal Secretary to Government,
Department of Social Welfare, Govt. of Karnataka, Bengaluru
8. The Principal Secretary to Government,
Labour Department, Govt. of Karnataka, Bengaluru
9. The Principal Secretary to Government,
Health Department, Govt. of Karnataka, Bengaluru.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಯನ್ನು ನಡೆಸಿಕೊಡಲು ಕುಲಪತಿಗಳನ್ನು ಕೋರಿದರು. ಕುಲಪತಿಗಳು ಸದಸ್ಯರನ್ನು ಸ್ವಾಗತಿಸಿ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಂಡರು.

The Registrar extended a warm welcome to all the members present in the second meeting of the Executive Council and requested the Vice Chancellor to conduct the Proceedings. The Vice Chancellor welcoming the members took up the agenda for consideration.

*ವಿಷಯ ಸಂಖ್ಯೆ 1: ದಿನಾಂಕ 29-04-2019 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಪ್ರಥಮ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.*

***Subject No. 1: Confirmation of the Proceedings of the first meeting of the Executive Council held on 29-04-2019.***

*ಪರಾಮರ್ಶನ ಟಿಪ್ಪಣಿ*

*ದಿನಾಂಕ 29-04-2019 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಪ್ರಥಮ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಲಾಗಿದೆ. ಸದರಿ ನಡವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡವಳಿಗಳು ಸ್ಥಿರೀಕರಣಗೊಂಡಂತಾಗಿವೆ.*

***Reference Note:***

*The Proceedings of the first meeting of the Executive Council held on 29-04-2019 were circulated to all the members. Since no objections or corrections have been received from any member, they are deemed to have been confirmed.*

ನಿರ್ಣಯ

ದಿನಾಂಕ 29 ಏಪ್ರಿಲ್, 2019 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಪ್ರಥಮ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲಾಯಿತು.

**RESOLUTION**

The Executive Council confirmed the Proceedings of the first meeting held on 29th April 2019.

*ವಿಷಯ ಸಂಖ್ಯೆ 2: ದಿನಾಂಕ 29-04-2019 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಪ್ರಥಮ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಅನುಸರಣಾ ವರದಿಯನ್ನು ಪರಿಗಣಿಸುವ ಬಗ್ಗೆ.*

***Subject No. 2: Action Taken Report (ATR) on the resolutions of the first meeting of the Executive Council held on 29-04-2019***

*ಪರಾಮರ್ಶನ ಟಿಪ್ಪಣಿ*

*ದಿನಾಂಕ 29-04-2019 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಪ್ರಥಮ ಸಭೆಯಲ್ಲಿ ತೆಗೆದು ಕೊಂಡ ತೀರ್ಮಾನಗಳ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗೆ ಮಂಡಿಸಲಾಗಿದೆ.*

***Reference Note:***

*The Action Taken Report on the resolutions of the first meeting of the Executive Council held on 29-04-2019 is placed before the Executive Council for kind information.*

## ನಿರ್ಣಯ

ದಿನಾಂಕ 29 ಏಪ್ರಿಲ್, 2019 ರಂದು ಜರುಗಿದ ಪ್ರಥಮ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತು ಗಮನಿಸಿತು.

## RESOLUTION

The Executive Council noted the Action Taken Report on the resolutions of the first meeting of the Executive Council held on 29-04-2019.

*ವಿಷಯ ಸಂಖ್ಯೆ 3: ದಿನಾಂಕ 25-06-2019 ರಂದು ಆಯೋಜಿಸಿರುವ ಕಾಮಗಾರಿ ಸಮಿತಿಯ 4ನೇ ಸಭೆಯ ನಡವಳಿಗಳನ್ನು ಪರಿಗಣಿಸುವ ಬಗ್ಗೆ.*

***Subject No. 3: To consider the Proceedings of the 4th meeting of the Works Committee held on 25-06-2019 – reg.***

*ಪರಾಮರ್ಶನ ಟಿಪ್ಪಣಿ*

*ಕಾಮಗಾರಿ ಸಮಿತಿಯ 4ನೇ ಸಭೆಯನ್ನು ಈ ಕೆಳಕಂಡ ವಿಷಯಗಳನ್ನು ಪರಿಗಣಿಸಲು ದಿನಾಂಕ 25-06-2019 ರಂದು ವಿಶ್ವವಿದ್ಯಾಲಯದ ಗದಗ ಕಛೇರಿಯಲ್ಲಿ ಆಯೋಜಿಸಲಾಗಿದೆ.*

1. *To consider and approve the lowest bid of Tender for the construction of Training Centre Building in the KSRDPRU Campus, Gadag;*
2. *To consider and approve the estimates of the works for the construction of C & D Quarters in the KSRDPR University Campus, Gadag.*
3. *To consider the tendering of work for the construction of Girls Hostel Buildings for tender purpose.*
4. *Any other subjects with the permission of the Chair.*

*ಸದರಿ ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಸಭೆಯಲ್ಲಿ ಮಂಡಿಸಲಾಗುವುದು.*

### *Reference Note:*

*The 4th meeting of the Works Committee is scheduled to be held on 25th June 2019 at 11 a.m. in the University Office, Gadag, to consider the following items of agenda:*

1. *To consider and approve the lowest bid of Tender for the construction of Training Centre Building in the KSRDPRU Campus, Gadag;*
2. *To consider and approve the estimates of the works for the construction of C & D Quarters in the KSRDPR University Campus, Gadag.*
3. *To consider the tendering of work for the construction of Girls Hostel Buildings for tender purpose.*
4. *Any other subjects with the permission of the Chair.*

*The Proceedings of the said meeting will be placed before the Executive Council on table for consideration and approval.*

**ನಿರ್ಣಯ**

ದಿನಾಂಕ 25-06-2019 ರಂದು ಜರುಗಿದ ಕಾಮಗಾರಿ ಸಮಿತಿಯ ಸಭೆಯಲ್ಲಿ ಚರ್ಚಿತವಾಗಿದ್ದ ಪ್ರತಿಯೊಂದು ವಿಷಯಗಳ ಬಗ್ಗೆ ಕುಲಪತಿಗಳು ಕಾರ್ಯನಿರ್ವಾಹಕ ಪರಿಷತ್ತಿಗೆ ವಿವರಿಸಿದರು. ಕಾಮಗಾರಿ ಸಮಿತಿ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರಿಗೆ ಒದಗಿಸಲಾಯಿತು.

ಸದಸ್ಯರು ಕೆಳಕಂಡ ಅಂಶಗಳ ಬಗ್ಗೆ ಸಲಹೆಗಳನ್ನು ನೀಡಿದರು. ವಿಶ್ವವಿದ್ಯಾಲಯದ ಇಂಜಿನಿಯರುಗಳು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಮರ್ಪಕ ಉಸ್ತುವಾರಿ ಮಾಡುವುದು, ಕಾಮಗಾರಿಗಳ ಪ್ರಗತಿಯ ಕುರಿತು ಪ್ರತಿ ವಾರ ವರದಿ ಸಲ್ಲಿಸುವುದು, ಕಾಮಗಾರಿಗಳನ್ನು ಯುದ್ಧೋಪಾದಿಯಲ್ಲಿ ನಡೆಸುವುದು, ಕುಲಪತಿಗಳು, ಕುಲಸಚಿವರು ಹಾಗೂ ವಿತ್ತಾಧಿಕಾರಿಗಳು ಆಗಿಂದ್ದಾಗ್ಗೆ ಕಟ್ಟಡಗಳ ನಿರ್ಮಾಣ ಸ್ಥಳಕ್ಕೆ ಭೇಟಿ ನೀಡಿ ಮೇಲುಸ್ತುವಾರಿ ನಡೆಸುವುದು, ಸಮರ್ಪಕವಾದ ಶೌಚಾಲಯಗಳನ್ನು ನಿರ್ಮಾಣ ಮಾಡಿಸುವುದು, ಮುಖ್ಯವಾಗಿ ಮಹಿಳೆಯರ ವಸತಿ ನಿಲಯಗಳಲ್ಲಿ ವಿಶೇಷ ಗಮನ ನೀಡಿ ಶೌಚಾಲಯಗಳ ನಿರ್ಮಾಣ ಮಾಡುವುದು.

ಕುಲಪತಿಗಳು ಉತ್ತರಿಸಿ, ಸದಸ್ಯರು ನೀಡಿದ ಎಲ್ಲಾ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು, ಅಲ್ಲದೆ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲು ಸಾಕಷ್ಟು ಮುಂಜಾಗ್ರತೆಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ನಂತರ, ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ವಹಿಸಿರುವ ಗುತ್ತಿಗೆದಾರರನ್ನು ಚರ್ಚೆಗೆ ಆಹ್ವಾನಿಸಲಾಯಿತು. ಸದಸ್ಯರು ಗುತ್ತಿಗೆದಾರರನ್ನು ಉದ್ದೇಶಿಸಿ ಕಾಮಗಾರಿಯನ್ನು ಗುಣಮಟ್ಟ ಕಾಪಾಡುವುದರ ಜೊತೆ ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಿದರು.

ಸುದೀರ್ಘ ಚರ್ಚೆಯ ನಂತರ, ದಿನಾಂಕ 25 ಜೂನ್, 2019 ರಂದು ಜರುಗಿದ ಕಾಮಗಾರಿ ಸಮಿತಿ ಸಭೆಯ ಈ ಕೆಳಕಂಡ ನಡವಳಿಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

The Vice Chancellor briefed the Executive Council, the details of each of the items discussed in the Works Committee meeting held on 25th June 2019 and the decisions taken thereon. The Proceedings of the Works Committee meeting were presented to the Members.

The Members suggested for monitoring the works by the University Engineers ensuring quality of work, submitting weekly report on the progress of works, executing the works on war-footing, periodical visits to the site by the Vice Chancellor, Registrar and the Finance Officer to oversee the works, construction of proper toilets, particularly in the ladies hostel with special care.

The Vice Chancellor said that all the suggestions of the Members will be kept in mind and in fact enough precautions have been taken to ensure quality and timely execution of works.

The Contractor, to whom the work of construction of Training Centre is proposed to be entrusted was invited to the meeting for discussion. The Members asked the Contractor to ensure quality of work and to complete the work within the time schedule.

After detailed deliberations, the Executive Council unanimously resolved to approve the following Proceedings of the Works Committee meeting held on 25th June 2019:

**"1. To Consider and Approve the lowest Bids of Tender for the Construction of Training Centre Building in the KSRDPR University Campus, Gadag**

ಕಾಮಗಾರಿ ಸಮಿತಿಯು ಮೇಲೆ ತಿಳಿಸಿರುವ "Construction of Training Centre Building in the KSRDPRU Campus, Gadag" ಕಾಮಗಾರಿಯ ಟೆಂಡ್‌ರನ ಎಲ್ಲಾ ವಿವರಗಳನ್ನು ಪರಿಶೀಲಿಸಿ, ಸದರಿ ಟೆಂಡರ್‌ನಲ್ಲಿ ಅತೀ ಕಡಿಮೆ ದರವನ್ನು (10.888 % ಹೆಚ್ಚಿಗೆ) ನಮೂದಿಸಿರುವ M.K.Hegde Constructions pvt ltd ರವರೊಂದಿಗೆ Negotiation ಮಾಡಲಾಗಿ, ಸದರಿಯವರು E-procurement website ನಲ್ಲಿ ನಮೂದಿಸಿರುವ ದರಕ್ಕೆ 2% ರಿಯಾಯಿತಿ ನೀಡಲು ಅವರ ಪತ್ರದ ಮೂಲಕ ಒಪ್ಪಿಗೆ ಸೂಚಿಸಿರುತ್ತಾರೆ. ಆದುದರಿಂದ M.K.Hegde Constructions pvt ltd ಅವರ (8.888 % ಹೆಚ್ಚಿಗೆ) ಆರ್ಥಿಕ ಬಿಡ್‌ಗೆ ಅನುಮೋದನೆ ನೀಡಲು, ಕಾಮಗಾರಿ ಆದೇಶ ನೀಡಬಹುದೆಂದು ನಿರ್ಧರಿಸಿತು.

**2. To consider and approve the estimates of the works for the Construction of C & D type Quarters in the KSRDPR University Campus, Gadag.**

A. **<u>Proposed construction of C-type Quarters in the new KSRDPRU campus, Gadag:</u>**

**C-type Quarters** ಕಟ್ಟಡ ನಿರ್ಮಾಣದ ಅಂದಾಜು ಪತ್ರಿಕೆಯು ಈ ಮೊದಲೆ PRED ಮುಖ್ಯ ಅಭಿಯಂತರವರಿಂದ ಅಂದಾಜು ಮೊತ್ತ ರೂ.446.00 ಲಕ್ಷಗಳಿಗೆ ತಾಂತ್ರಿಕ ಪರಿಶೀಲನೆಯಾಗಿದ್ದು ಇರುತ್ತದೆ, ಆದರೆ ಸದರಿ ಅಂದಾಜು ಪತ್ರಿಕೆಯಲ್ಲಿ ಕೆಲ ತಾಂತ್ರಿಕ ಬದಲಾವಣೆಯಾದ ಕಾರಣ ಪರಿಷ್ಕೃತ ಅಂದಾಜು ಪತ್ರಿಕೆ (ರೂ.499.85 ಲಕ್ಷಗಳಿಗೆ) ಯನ್ನು ಮುಖ್ಯ ಅಭಿಯಂತರರಿಗೆ ತಾಂತ್ರಿಕ ಪರಿಶೀಲನೆ ಮಾಡಲು ಸಲ್ಲಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತಿನಿಂದ ಆಡಳಿತಾತ್ಮಕ ಮಂಜೂರಾತಿ ಪಡೆದು, PRED ಮುಖ್ಯ ಅಭಿಯಂತರವರಿಂದ ಅಂತಿಮ ತಾಂತ್ರಿಕ ಪರಿಶೀಲನೆ ಪಡೆದು ಮುಂದಿನ ಕ್ರಮ ಜರುಗಿಸಲು ನಿರ್ಧರಿಸಲಾಯಿತು.

B. **<u>Proposed construction of D-type Quarters in the new KSRDPRU campus, Gadag:</u>**

**D-type Quarters** ಕಟ್ಟಡ ನಿರ್ಮಾಣದ ಅಂದಾಜು ಪತ್ರಿಕೆಯು ಈ ಮೊದಲೆ PRED ಮುಖ್ಯ ಅಭಿಯಂತರವರಿಂದ ಅಂದಾಜು ಮೊತ್ತ ರೂ.378.00 ಲಕ್ಷಗಳಿಗೆ ತಾಂತ್ರಿಕ ಪರಿಶೀಲನೆಯಾಗಿದ್ದು ಇರುತ್ತದೆ, ಆದರೆ ಸದರಿ ಅಂದಾಜು ಪತ್ರಿಕೆಯಲ್ಲಿ ಕೆಲ ತಾಂತ್ರಿಕ ಬದಲಾವಣೆಯಾದ ಕಾರಣ ಪರಿಷ್ಕೃತ

ಅಂದಾಜು ಪತ್ರಿಕೆ (ರೂ.382.00 ಲಕ್ಷಗಳಿಗೆ) ಯನ್ನು ಮುಖ್ಯ ಅಭಿಯಂತರರಿಗೆ ತಾಂತ್ರಿಕ ಪರಿಶೀಲನೆ ಮಾಡಲು ಸಲ್ಲಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತಿನಿಂದ ಆಡಳಿತಾತ್ಮಕ ಮಂಜೂರಾತಿ ಪಡೆದು, PRED ಮುಖ್ಯ ಅಭಿಯಂತರವರಿಂದ ಅಂತಿಮ ತಾಂತ್ರಿಕ ಪರಿಶೀಲನೆ ಪಡೆದು ಮುಂದಿನ ಕ್ರಮ ಜರುಗಿಸಲು ನಿರ್ಧರಿಸಲಾಯಿತು.

**3. To consider and approve the work for the construction of Girls Hostel Building in the KSRDPR University Campus, Gadag for tendering.**

ಕಾಮಗಾರಿ ಸಮಿತಿಯು ಉದ್ದೇಶಿತ ನೂತನ ಬಾಲಕಿಯರ ವಸತಿ ನಿಲಯ ಕಟ್ಟಡ ಅಂದಾಜು ಪಟ್ಟಿಯ ವಿವರಗಳನ್ನು ಪರಿಶೀಲಿಸಿತು. PRED CE ಯವರಿಂದ ಪಡೆದ ತಾಂತ್ರಿಕ ಪರಿಶೀಲನೆ ಮತ್ತು ಕರ್ನಾಟಕ ಸರ್ಕಾರದ RDPR ಪ್ರಧಾನ ಕಾರ್ಯದರ್ಶಿಯವರು ನೀಡಿದ ಆಡಳಿತಾತ್ಮಕ ಅನುಮೋದನೆಯನ್ನು ಗಮನದಲ್ಲಿ ಇಟ್ಟುಕೊಂಡು, ಸವಿವರವಾಗಿ ಚರ್ಚಿಸಿ ಉದ್ದೇಶಿತ ನೂತನ ಬಾಲಕಿಯರ ವಸತಿ ನಿಲಯ ಕಟ್ಟಡ ಅಂದಾಜು ಪಟ್ಟಿಗೆ ಅನುಮೋದನೆ ನೀಡಲು ನಿರ್ಧರಿಸಿತು. ಸದರಿ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಲು KSRDPR ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಅಭಿಯಂತರರಿಗೆ ಅಧಿಕಾರ ನೀಡಲು ಕಾಮಗಾರಿ ಸಮಿತಿಯು ನಿರ್ಧರಿಸಿತು. ಅದರಂತೆ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಅಭಿಯಂತರರು, PRED CE ಯವರಿಂದ ಅಂತಿಮ ತಾಂತ್ರಿಕ ಪರಿಶೀಲನೆ (Including Sturctural Design, Electrical and Plumbing works) ಪಡೆದು ಉದ್ದೇಶಿತ ನೂತನ ಬಾಲಕಿಯರ ವಸತಿ ನಿಲಯ ಕಟ್ಟಡದ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಿ, ಟೆಂಡರ್ ಕರೆಯವುದಕ್ಕೆ ಅನುಮೋದನೆ ನೀಡಬಹುದೆಂದು ಸಹ ನಿರ್ಣಯಿಸಲಾಯಿತು.

**4. To consider termination of contract for the work Construction of Replica of Sabarmati Ashram Building in KSRDPR University Campus, Gadag**

ಕಾಮಗಾರಿ ಸಮಿತಿಯು ಮೇಲಿನ ವಿವರಗಳನ್ನು ಪರಿಶೀಲಿಸಿತು. ಆರ್.ಶ್ರೀನಿವಾಸ್ ರೆಡ್ಡಿ ಅವರೊಂದಿಗಿನ ಒಪ್ಪಂದವನ್ನು ರದ್ದುಪಡಿಸಿ ಸದರಿ ಕಾಮಗಾರಿಯನ್ನು KRDIL ಸಂಸ್ಥೆಗೆ ವಹಿಸಿಕೊಡಲು ಕಾಮಗಾರಿ ಸಮಿತಿಯು ನಿರ್ಧರಿಸಿತು.

## TABLE AGENDA-1

**To consider and approve the Increase in quantities of items considered in BOQ of the work of construction of School Building-SB1, Boys Hostel Block-1, Dining Block-1 in KSRDPR University Campus, Gadag**

ಕಾಮಗಾರಿ ಸಮಿತಿಯು ಮೇಲಿನ ವಿವರಗಳನ್ನು ಸವಿವರವಾಗಿ ಪರಿಶೀಲಿಸಿತು. ಅಂಶಗಳ ಹೆಚ್ಚಳಕ್ಕೆ ಪ್ರಮುಖವಾಗಿ ಬಾಲಕರ ವಸತಿ ನಿಲಯ ಕಟ್ಟಡ ಹಾಗೂ ಭೋಜನಾ ನಿಲಯ ಕಟ್ಟಡದ ಸ್ಥಳವನ್ನು ಬದಲಿಸಿರುವುದು, ಶಾಲಾ ಕಟ್ಟಡದ ಸ್ಥಳದಾನುಗುಣ ಮತ್ತು Proof Checking ನಂತರ ಅಂದಾಜು ಪತ್ರಿಕೆಗಳಲ್ಲಿ ಕೆಲವು ಬದಲಾವಣೆಗಳಾಗಿರುವ ಕಾರಣವನ್ನು ಪರಿಗಣಿಸಿ, ಸದರಿ ಅಂಶಗಳ ಹೆಚ್ಚಳಕ್ಕೆ ಅನುಮೋದನೆ ನೀಡಲು ಸಮಿತಿಯು ನಿರ್ಧರಿಸಿತು".

B. Unnumefaw

*ವಿಷಯ ಸಂಖ್ಯೆ 4: ವಿಶ್ವವಿದ್ಯಾಲಯದ ವಿವಿಧ ಕೋರ್ಸುಗಳ ಪ್ರವೇಶಕ್ಕೆ ಮತ್ತು ಪರೀಕ್ಷಾ ಶುಲ್ಕಗಳನ್ನು ಪರಿಗಣಿಸುವ ಬಗ್ಗೆ.*

***Subject No. 4: To consider the Fee structure for admission to various courses and Examinations of the University – reg.***

*<u>ಪರಾಮರ್ಶನ ಟಿಪ್ಪಣಿ</u>*

*ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳು 2017–18ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭವಾದವು. ಪ್ರಥಮ ಕುಲಪತಿಗಳು ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 85 ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಉಪಬಂಧಗಳಲ್ಲಿ ಚಲಾಯಿಸಿ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ವಿವಿಧ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಮತ್ತು ಪರೀಕ್ಷಾ ಶುಲ್ಕಗಳನ್ನು 2017–18 ಮತ್ತು 2018–19ನೇ ಸಾಲುಗಳಿಗೆ ಅಧಿಸೂಚಿಸಲಾಯಿತು. ಸದರಿ ಅಧಿಸೂಚನೆಯ ಪ್ರತಿಗಳನ್ನು ಅನುಬಂಧ ಎ ಮತ್ತು ಬಿ ನಲ್ಲಿ ಲಗತ್ತಿಸಲಾಗಿದೆ. ಅದೇ ಶುಲ್ಕಗಳನ್ನು 2019–20ನೇ ಶೈಕ್ಷಣಿಕ ಸಾಲಿಗೂ ಮುಂದುವರೆಸಲಾಗಿದೆ.*

*ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ.*

***Reference Note:***

*The University started its academic activities from the academic year 2017-18. The first Vice Chancellor in exercise of the Transitory Provisions under Section 85 of the Act, approved the Fees Structure for admission to various Postgraduate Courses and Examinations and notified after a meeting of Officers of the University for the academic years 2017-18 and 2018-19, respectively. Copies of the Notifications are enclosed herewith as Annexures-A and B. The same Fees structure has been continued for admission and Examination for the academic year 2019-20.*

*The matter is placed before the Executive Council for kind perusal and ratification.*

## ನಿರ್ಣಯ

ಡಾ. ಅಬ್ದುಲ್ ಹಕೀಂ ಅವರು ಚರ್ಚೆಯಲ್ಲಿ ಭಾಗವಹಿಸಿ ಪ್ರವರ್ಗ–2B ನಲ್ಲಿ ಬರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಮೀಸಲಾತಿ ಮತ್ತು ಶುಲ್ಕ ರಿಯಾಯಿತಿ ಪಡೆಯಲು ರಾಜ್ಯ ಸರ್ಕಾರ ವಾರ್ಷಿಕ ಆದಾಯ ಮಿತಿಯನ್ನು ರೂ. 6.00 ಲಕ್ಷಗಳಿಗೆ ಹೆಚ್ಚಿಸಿದೆ. ಇದನ್ನು ಪರಿಶೀಲಿಸಿ ಸರಿಪಡಿಸುವಂತೆ ತಿಳಿಸಿದರು. ಡಾ. ಆರ್. ಎಸ್. ದೇಶಪಾಂಡೆಯವರು ಮಾತನಾಡಿ ಹೊರ ರಾಜ್ಯದ ವಿದ್ಯಾರ್ಥಿಗಳು ಆಯಾ ರಾಜ್ಯಗಳಲ್ಲಿ ಶುಲ್ಕ ಮರುಪಾವತಿ ಪಡೆಯುವಂತೆ ಸೂಚಿಸಿ ಶುಲ್ಕ ಅಧಿಸೂಚನೆಯಲ್ಲಿ ಇದರ ಬಗ್ಗೆ ಒಂದು ಟಿಪ್ಪಣಿಯನ್ನು ಸೇರಿಸುವಂತೆ ಸಲಹೆಯಿತ್ತರು.

ಚರ್ಚೆಯ ನಂತರ 2019–20ನೇ ಸಾಲಿನಲ್ಲಿ ಅಧಿಸೂಚಿಸಿರುವ ಶುಲ್ಕಗಳನ್ನು ಅನುಸಮರ್ಥಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

## RESOLUTION

During the discussion Dr. Abdul Hakim mentioned that in respect of Minority students coming under 2B category, the Government has enhanced the annual income limit for claiming reservation and fee concession to Rs. 6.00 lakhs. This should be verified and corrected. Dr. R.S. Deshpande suggested that a Note be indicated in the Fee Notification saying that eligible students from outside Karnataka may claim reimbursement of fee from their respective States.

After deliberations, the Executive Council resolved to ratify the Fee Structure followed in the University during the academic year 2019-20.

*ವಿಷಯ ಸಂಖ್ಯೆ 5: ವಿಶ್ವವಿದ್ಯಾಲಯದ ಘಟಿಕೋತ್ಸವಕ್ಕೆ ಶುಲ್ಕ ನಿಗದಿಪಡಿಸುವ ಬಗ್ಗೆ.*

***Subject No. 5: To consider the Convocation Fee for the Convocation of the University – reg.***

*ಪರಾಮರ್ಶನ ಟಿಪ್ಪಣಿ*

*2017-18ನೇ ಸಾಲಿನಲ್ಲಿ ಪ್ರವೇಶ ಪಡೆದ ಮೊದಲ ಬ್ಯಾಚ್‌ನ ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ಕೋರ್ಸನ್ನು ಸಧ್ಯದಲ್ಲಿಯೇ ಪೂರೈಸಲಿದ್ದಾರೆ. ಇವರು ಘಟಿಕೋತ್ಸವದಲ್ಲಿ ಪದವಿ ಪಡೆಯಲು ಅರ್ಜಿ ಸಲ್ಲಿಸಲು ಸೂಕ್ತ ಶುಲ್ಕವನ್ನು ನಿಗಧಿ ಪಡಿಸಬೇಕಾಗಿದೆ.*

*ರಾಜ್ಯದ ಇತರ ವಿಶ್ವವಿದ್ಯಾಲಯಗಳು ವಿಧಿಸುತ್ತಿರುವ ಘಟಿಕೋತ್ಸವ ಶುಲ್ಕಗಳನ್ನು ಪರಿಶೀಲಿಸಲಾಗಿದೆ. ಅದರಂತೆ ಭಾರತೀಯ/ಅಂತರಾಷ್ಟ್ರೀಯ ವಿದ್ಯಾರ್ಥಿಗಳು ಘಟಿಕೋತ್ಸವದಲ್ಲಿ ಉಪಸ್ಥಿತಿ ಅಥವಾ ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಈ ಕೆಳಕಂಡ ಶುಲ್ಕ ವಿಧಿಸಲು ಪ್ರಸ್ತಾಪಿಸಲಾಗಿದೆ.*

| ಕ್ರ. ಸಂ. | ಘಟಿಕೋತ್ಸವ ಶುಲ್ಕ | ಉಪಸ್ಥಿತಿ/ಅನುಪಸ್ಥಿತಿ |
|---|---|---|
| 1. | | ರೂ. 1500=00 |

***Reference Note:***

*The first batch of students of Postgraduate Courses admitted during 2017-18 will be completing their course of study shortly. An appropriate fee has to be fixed for applying for Convocation by the students.*

*The Convocation fees being charged by different Universities in the State have been verified and accordingly proposed to adopt the convocation fee for receiving degree certificates in person or absentia for Indian and Non- Indian students is as under.*

| SL. No. | Convocation Fees | In Person / In Absentia |
|---|---|---|
| 1. | | 1500=00 |

*The matter is placed before the Executive Council for kind consideration and approval.*

### ನಿರ್ಣಯ

ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸಲು ಪ್ರಸ್ತಾಪಿಸಿರುವ ಶುಲ್ಕ ರೂ. 1,500/– ನ್ನು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಲು ನಿರ್ಣಯಿಸಿತು.

### RESOLUTION

The Executive Council resolved to approve the proposed fee of Rs. 1,500/- as Convocation Fee.

*ವಿಷಯ ಸಂಖ್ಯೆ 6: ಗೌರವ/ ಸಂದರ್ಶಕ/ ಎಮಿರಿಟಸ್ ಪ್ರಾಧ್ಯಾಪಕರು/ ಸಂಪನ್ಮೂಲ ವ್ಯಕ್ತಿಗಳನ್ನು ನೇಮಿಸುವ ಮತ್ತು ಮುಂದುವರೆಸುವ ಬಗ್ಗೆ.*

***Subject No. 6: To consider appointment and continuation of Honorary / Visiting / Emeritus Professors / Resource Persons in the University.***

*ಪರಾಮರ್ಶನ ಟಿಪ್ಪಣಿ*

*ವಿಶ್ವವಿದ್ಯಾಲಯವು 2017–18ನೇ ಶೈಕ್ಷಣಿಕ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿತು. ಖಾಯಂ ಅಧ್ಯಾಪಕರು ಇನ್ನು ನೇಮಕವಾಗಬೇಕಿದ್ದರಿಂದ ವಿವಿಧ ವಿಶ್ವವಿದ್ಯಾಲಯಗಳ/ ಸಂಸ್ಥೆಗಳ ಈ ಕೆಳಕಂಡ ಅನುಭವಿ ನಿವೃತ್ತ ಪ್ರಾಧ್ಯಾಪಕರು ಪ್ರತಿಷ್ಠಿತ ವಿಜ್ಞಾನಿಗಳನ್ನು ಗೌರವ/ ಸಂದರ್ಶಕ/ ಎಮಿರಿಟಸ್ ಪ್ರಾಧ್ಯಾಪಕರು/ ಸಂಪನ್ಮೂಲ ವ್ಯಕ್ತಿಗಳನ್ನು ಬೋಧನೆ ಮತ್ತು ಸಲಹೆ ನೀಡಲು 2017–18 ಮತ್ತು 2018–19ನೇ ಸಾಲುಗಳಲ್ಲಿ ನೇಮಿಸಿಕೊಳ್ಳಲಾಗಿತ್ತು.*

*ವಿಶ್ವವಿದ್ಯಾಲಯದಲ್ಲಿ ಇನ್ನೂ ಕೆಲವು ಹೊಸ ಸ್ನಾತಕೋತ್ತರ ಕೋರ್ಸುಗಳನ್ನು ಅಂದರೆ. M.A. in Public Policy and Governance, M.A. in Economic (Development Economics), M.Sc. Computer Science (Data Analytics) ಮುಂತಾದವುಗಳನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆ. ವಿಶ್ವವಿದ್ಯಾಲಯದಲ್ಲಿ ಇನ್ನೂ ಖಾಯಂ ಬೋಧಕ ಸಿಬ್ಬಂದಿಯನ್ನು ನೇಮಕ ಮಾಡಿಲ್ಲವಾದ್ದರಿಂದ ಮೇಲಿನ ವ್ಯಕ್ತಿಗಳ ಸೇವೆಯನ್ನು ಮತ್ತು ಅಗತ್ಯಕ್ಕೆ ತಕ್ಕಂತೆ ಅವರ ಲಭ್ಯತೆಯನ್ನು ಆಧಾರಿಸಿ ಅವರೊಂದಿಗೆ ಹೊಸ ವ್ಯಕ್ತಿಗಳನ್ನು 2019–20ನೇ ಸಾಲಿಗೆ ಬಳಸಿಕೊಳ್ಳಲು ಅವಶ್ಯಕತೆ ಇದೆ. ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.*

***Reference Note:***

*The University started its academic activities from the academic year 2017-18. In the absence of regular faculty, the University appointed the following experienced retired Professors / Distinguished Scientists from different Universities/Organizations as Honorary/Visiting Emeritus Professors/Resource Persons for teaching and guidance during the academic years 2017-18 and 2018-19.*

| ***Course*** | ***Name*** | ***Designation*** |
|---|---|---|
| *MA-RDPR* | | |
| | *Prof. D. Jeevan Kumar* | *Hon. / Vis. Professor* |
| | *Prof. N. Sivanna* | *Hon. / Vis. Professor* |
| | *Prof. M. Devendra Babu* | *Hon. / Vis. Professor* |
| *MSW* | *Prof Ghandi Doss* | *Hon. / Vis. Professor* |

| | |
|---|---|
| *Prof. TBBVS Ramanaiah* | *Hon. / Vis. Professor* |
| *Prof. Veenita Pai* | *Hon. / Vis. Professor* |
| *M.Sc.(Geoinformatics)* | |
| *Prof. P. P. Nageswara Rao* | *Hon. / Vis. Professor* |
| *Prof. B. Manikiam* | *Hon. / Vis. Professor* |
| *Shri J. B. Pradhan* | *Hon. / Vis. Professor* |
| *Dr. A. R.S. Bhat* | *Hon. / Vis. Professor* |
| *MPH* | |
| *Dr. Suresh Kisanrao* | *Hon. / Vis. Professor* |
| *Dr. Allen P. Ugargol* | *Resource Person* |
| *M.Sc. Food Science and Technology* | |
| *Dr. T.R. Prabhu* | *Resource Person* |
| *Dr. M. C. Varadraj* | *Resource Person* |
| *Dr. N. G. Malleshi* | *Resource Person* |
| *Dr. S. G. Kulkarni* | *Resource Person* |
| *Dr. Abdul Aziz* | *Resource Person* |
| *MBA (Rural Management / Agri-business Management* | |
| *Prof. S. S. Hugar* | *Resource Person* |

*It is proposed to start some additional PG Courses Viz., M.A. in Public Policy and Governance, M.A. in Economics (Development Economics), M.Sc. Computer Science (Data Analytics) etc. As the University is yet to recruit regular faculty, it is essential to continue the same persons and appoint others/avail services of resource persons depending upon the need for each course and their availability for the academic year 2019-20 also.*

*The matter is placed before the Executive Council for consideration and* approval.

**ನಿರ್ಣಯ**

ಕಾರ್ಯಸೂಚಿಯಲ್ಲಿ ಪಟ್ಟಿಮಾಡಿರುವ ಗೌರವ/ ಸಂದರ್ಶಕ/ ಎಮಿರಿಟಸ್ ಪ್ರಾಧ್ಯಾಪಕರ ಸೇವೆಯನ್ನು ಮುಂದುವರೆಸುವ ಪ್ರಸ್ತಾವನೆಯನ್ನು ಅನುಮೋದಿಸಲು ಹಾಗೂ ಹೊಸದಾಗಿ ಪ್ರಾರಂಭಿಸಲಾಗುವ ಕೋರ್ಸ್‌ಗಳಿಗೆ ಅಗತ್ಯವಿರುವ ಬೋಧಕರನ್ನು ನೇಮಕ ಮಾಡಲು ಕುಲಪತಿಗಳಿಗೆ ಅಧಿಕಾರ ನೀಡಿ ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

The Executive Council resolved to approve the proposal to continue the services of the Honorary/Visiting/Emeritus Professors listed in the Agenda and also authorized the Vice Chancellor to appoint additional Faculty required for the new Courses to be started, depending upon the need.

*ವಿಷಯ ಸಂಖ್ಯೆ 7: ವಿಶ್ವವಿದ್ಯಾಲಯ ನಿರ್ವಹಿಸಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ವಾಸ್ತವ್ಯವಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮುಂಗಡ ಭೋಜನ ವೆಚ್ಚವನ್ನು ಪಾವತಿಸುವ ಬಗ್ಗೆ.*

***Subject No. 7: Payment of Advance EBL (ಭೋಜನಾ ವೆಚ್ಚ) to SC / ST students residing in the hostels run and maintained by the University***

*ಪರಾಮರ್ಶನ ಟಿಪ್ಪಣಿ*

*ವಿಶ್ವವಿದ್ಯಾಲಯ ನಿರ್ವಹಿಸಿ ನಡೆಸುತ್ತಿರುವ ವಿದ್ಯಾರ್ಥಿ ನಿಲಗಳಲ್ಲಿ ವಾಸ್ತವ್ಯವಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚವನ್ನು ಪಾವತಿಸಲು ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿದೆ. ಈ ಭೋಜನಾ ವೆಚ್ಚವನ್ನು ಸರ್ಕಾರವು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. 1,500/- (ಒಂದು ಸಾವಿರದ ಐದು ನೂರು ರೂಪಾಯಿಗಳು) ರಂತೆ ವರ್ಷದ 11 ತಿಂಗಳ ಅವಧಿಗೆ ವಿಶ್ವವಿದ್ಯಾಲಯದ ಅಕೌಂಟಿಗೆ ಮಂಜೂರು ಮಾಡುತ್ತದೆ. ರಾಜ್ಯದ ಇತರ ವಿಶ್ವವಿದ್ಯಾಲಯಗಳು ಸದರಿ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಭರಿಸಿ ನಂತರ ಸಮಾಜ ಕಲ್ಯಾಣ ಇಲಾಖೆ ಬಿಡುಗಡೆ ಮಾಡುವ ಹಣದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಪದ್ಧತಿಯನ್ನು ಅನುಸರಿಸುತ್ತಿವೆ.*

*ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.*

***Reference Note:***

*The State Government has made a provision to pay EBL charges (ಭೋಜನಾ ವೆಚ್ಚ) for the students belonging to SC / ST communities residing in the hostels run and maintained by the University. It is to be noted that the EBL charges are sanctioned from the Social Welfare department to the University Hostel account at the rate of Rs.1500/- (Rs One thousand and five hundred only) per month per student for a duration of eleven months in an academic year. The aforesaid EBL charges are usually sanctioned at the end of the Academic year. The procedure followed by different Universities in the State is that the Universities pay the EBL charges to the students upfront and the same is adjusted after the amount is released from the Social Welfare department.*

*The matter is placed before the Executive Council for consideration and approval.*

**ನಿರ್ಣಯ**

ಪ್ರಸ್ತಾವನೆಯನ್ನು ಅನುಮೋದಿಸಿ ಇತರ ವಿಶ್ವವಿದ್ಯಾಲಯಗಳು ಅನುಸರಿಸುತ್ತಿರುವ ಭರಿಸಿ ನಂತರ ಹೊಂದಾಣಿಕೆ ಮಾಡಿಕೊಳ್ಳುವ ಪದ್ಧತಿಯನ್ನು ಅನುಸರಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

The Executive Council resolved to approve the proposal and further resolved to follow the procedure of paying the EBL charges to the students upfront and adjust it after the amount is released from the Social welfare Department.

*ಟೇಬಲ್ ಅಜೆಂಡಾ* **Table Agenda:**

*ವಿಷಯ ಸಂಖ್ಯೆ 8: ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರಕ್ಕೆ ಸಹಾಯಕ ನಿರ್ದೇಶಕರನ್ನು ನೇಮಿಸುವ ಬಗ್ಗೆ.*

**Subject No. 8:** ***To consider appointment of an Assistant Director to the Centre for Training, Publication and Supervision on Contract basis.***

*ಪರಾಮರ್ಶನ ಟಿಪ್ಪಣಿ*

*ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 02 ಜಿಪಸ 2017 ದಿನಾಂಕ 11-05-2017 ಮತ್ತು ತಿದ್ದುಪಡಿ ಆದೇಶ ದಿನಾಂಕ 21-06-2017 ರಲ್ಲಿ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಕೇಂದ್ರಕ್ಕೆ ತಲಾ ಒಂದರಂತೆ ಎರಡು ಸಹಾಯಕ ನಿರ್ದೇಶಕರ ಹುದ್ದೆಗಳನ್ನು, ಸಹಾಯಕ ಕುಲಸಚಿವರ ಹುದ್ದೆಗೆ ಸಮಾನಾಂತರವಾಗಿ ರೂ. 28,100-50,100 (ಹಿಂದಿನ ವೇತನ ಶ್ರೇಣಿ)ಯಲ್ಲಿ ಸೃಷ್ಟಿಸಲಾಗಿದೆ. ಈ ಹುದ್ದೆಗಳ ಪರಿಷ್ಕೃತ ವೇತನ ಶ್ರೇಣಿ ರೂ. 52,650-97,100 ಆಗಿರುತ್ತದೆ. ಈ ಹುದ್ದೆಗಳಿಗೆ ಖಾಯಂ ನೇಮಕಾತಿ ಇನ್ನೂ ಆಗಬೇಕಾಗಿರುತ್ತದೆ. ಪ್ರಸ್ತುತ, ಕುಲಸಚಿವರಿಗೆ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ನಿರ್ದೇಶಕ ಹುದ್ದೆಯ ಪ್ರಭಾರ ವಹಿಸಲಾಗಿದೆ. ವಿಶ್ವವಿದ್ಯಾಲಯ ಈ ಕೇಂದ್ರದ ಮೂಲಕ ತರಬೇತಿ ಕಾರ್ಯಕ್ರಮಗಳನ್ನು ಈ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಮತ್ತು ಕೆಲವು ಹೊಸ ಕೋರ್ಸುಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಆದುದರಿಂದ, ಒಬ್ಬ ಸಹಾಯಕ ನಿರ್ದೇಶಕರ ಸೇವೆಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಪಡೆಯಲು ಪ್ರಸ್ತಾಪಿಸಲಾಗಿದೆ.*

*ಡಾ. ಅಬ್ದುಲ್ ಅಜೀಜ್, ಜಂಟಿ ನಿರ್ದೇಶಕರು (ನಿವೃತ್ತ) ಮಾರ್ಕೆಟಿಂಗ್/ ಟ್ರೈನಿಂಗ್, ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳಿ (KMF), ಧಾರವಾಡ ಇವರು, ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್‌ಮೆಂಟ್, ಆನಂದ್, ಗುಜರಾತ್ (IRMA) ನಿಂದ ಪಶುಸಂಗೋಪನೆಯಲ್ಲಿ ಪದವಿ ಮತ್ತು ಗ್ರಾಮೀಣ ವ್ಯವಹಾರದ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರಾಗಿದ್ದು ಮೇ 2019 ರಲ್ಲಿ ಸೇವೆಯಿಂದ ನಿವೃತ್ತರಾಗಿರುತ್ತಾರೆ. ಇವರು ಪ್ರಸ್ತುತ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಎ., ಎಂ.ಕಾಂ. ಹಾಗೂ ಎಂ.ಎಸ್‌ಸಿ. (ಆಹಾರ ವಿಜ್ಞಾನ) ಕೋರ್ಸುಗಳಲ್ಲಿ ಸಂದರ್ಶಕ ಬೋಧಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಲು ಮಹಾಮಂಡಳಿಯಲ್ಲಿ ವಿವಿಧ ವಿಭಾಗಗಳಲ್ಲಿ (Milk Procurement, providing technical inputs services, Marketing of Milk and Milk Products, HRD, Training and Extension) 35 ವರ್ಷಗಳ ಅನುಭವವುಳ್ಳವರಾಗಿದ್ದಾರೆ. ಇವರು ವಿಶ್ವವಿದ್ಯಾಲಯದ ತರಬೇತಿ/ ವಿಸ್ತರಣೆ ಮತ್ತು ಪ್ರಕಟಣೆ ವಿಭಾಗದಲ್ಲಿ ಬೋಧನೆಯ ಜೊತೆಗೆ ಪೂರ್ಣಕಾಲಿಕ ಸೇವೆ ಸಲ್ಲಿಸಲು ಮುಂದಾಗಿದ್ದಾರೆ. ಆದುದರಿಂದ ಡಾ. ಅಬ್ದುಲ್ ಅಜೀಜ್ ಅವರ ಸೇವೆಯನ್ನು ಮಾಹೆಯಾನ ರೂ. 50,000/- ರಂತೆ ತಾತ್ಕಾಲಿಕವಾಗಿ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದಲ್ಲಿ ಸಹಾಯಕ ನಿರ್ದೇಶಕರಾಗಿ ಪೂರ್ಣಕಾಲಿಕವಾಗಿ ಪಡೆಯಲು ಉದ್ದೇಶಿಸಲಾಗಿದೆ.*

*ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.*

***Reference Note:***

*In the Government Order No. ಗ್ರಾಅಪ 02 ಜಿಪಸ 2017, dated 11-05-2017 and Corrigendum Order dated 21/06-2017, two posts of Assistant Directors in the cadre of Assistant Registrar in the pay scale of Rs. 28,100-50100 (pre-revised), one each in the Centre of research, Innovation & Evaluation and Centre for Training,*

*Publication and Supervision were created to the University. The revised pay scale is Rs. 52,650-97100. Regular appointments to these posts are yet to be made. Presently, the Registrar is placed in-charge of the Director of the Centre for Training, Publication and Supervision. As the University is proposing to start training programmes through the Centre for Training, Publication and Supervision and few new Courses from the current academic year, it is essential to have supporting staff to the Centre. Therefore, it is proposed to engage an Assistant Director temporarily on contract and full-time basis.*

*Dr. Abdul Aziz, Joint Director (Retired), Marketing/Training, Karnataka Milk Federation (KMF), Dharwad, is a Veterinary Graduate and a Postgraduate in Rural Management from the Institute of Rural Management, Anand (IRMA), Gujarat, who has retired from service in May 2019. He has been teaching M.B.A., M.Com. and M.Sc. (FST) Courses in the KSRDPR University as Visiting Faculty. He has 35 years of experience working in various departments in KMF like Milk Procurement, providing technical inputs services, Marketing of Milk and Milk Products, HRD, Training and Extension. He has come forward to serve the University on full time basis in Training/Extension and Publication wing and also associate himself in teaching the above courses. Hence, it is proposed to engage the services of Dr. Abdul Aziz as Assistant Director temporarily on full-time basis in the Centre for Training, Publication and Supervision on consolidated remuneration of Rs. 50,000/- per month. The Executive Council may kindly approve the proposal and determine the consolidated remuneration.*

*Hence, the matter is placed before the Executive Council for kind consideration.*

ನಿರ್ಣಯ

ಡಾ. ಅಬ್ದುಲ್ ಅಜೀಜ್, ಜಂಟಿ ನಿರ್ದೇಶಕರು (ನಿವೃತ್ತ), ವ್ಯಾಪಾರ/ ತರಬೇತಿ, ಕರ್ನಾಟಕ ಹಾಲು ಒಕ್ಕೂಟ (KMF), ಧಾರವಾಡ, ಇವರನ್ನು ಗುತ್ತಿಗೆ ಆಧಾರದಲ್ಲಿ ಪೂರ್ಣಕಾಲಿಕವಾಗಿ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಸಹಾಯಕ ನಿರ್ದೇಶಕರಾಗಿ ಮಾಹೆಯಾನ ರೂ. 50,000/– (ಐವತ್ತು ಸಾವಿರ ರೂಪಾಯಿಗಳು ಮಾತ್ರ) ಕ್ರೋಡೀಕೃತ ಸಂಭಾವನೆಯ ಮೇಲೆ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ, ಯಾವುದು ಮೊದಲೋ ಅಲ್ಲಿಯವರೆಗೆ, ನೇಮಕ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು. ಇವರು ಅಗತ್ಯವಿದ್ದಾಗ ಅವರ ಪರಿಣತಿಯ ವಿಷಯಗಳಲ್ಲಿ ತರಗತಿಗಳನ್ನು ತೆಗೆದುಕೊಳ್ಳತಕ್ಕದ್ದು.

**RESOLUTION**

The Executive Council resolved to approve the proposal to appoint Dr. Abdul Aziz, Joint Director (Retired), Marketing/Training, Karnataka Milk Federation (KMF), Dharwad, as Assistant Director in the Centre for Training, Publication and Supervision on full-time contract basis on a consolidated remuneration of Rs. 50,000/- per month for a period of one year or until further orders, whichever is earlier. He is also required to engage classes in the area of is specialization as and when required.

***Subject No. 9: To consider entering into Memorandum of Understanding (MoU) between KSRDPR University, Gadag and Centre for Educational and Social Studies (CESS), Bengaluru – reg.***

***Reference Note:***

*The Karnataka State Rural Development and Panchayat Raj University (KSRDPRU), has been established for teaching, training, and research on sustainable rural development and panchayat raj institutions. The objective of the University is to strengthen local self-governance system and to give impetus for study and research for comprehensive rural development in the State of Karnataka.*

*The Educational and Social Studies (CESS), Bengaluru, has been working on Research projects, policy advocacy and capacity building programs in various domains like Education and Public Health in which studies to evaluate the functionality of VHSNCs in Karnataka, Capacity building of District level officers of AYUSH department, workshops, stakeholder meetings etc and in the domain of Education, Study on Employability skills, Industry Interface- effects on employability, Revival and Rejuvenation of Higher Education, workshops to faculty and students , faculty development programs, on sustenance quality in higher education and so on.*

*In order to implement the objectives of the University more effectively and in the academic growth of the University, it is proposed to enter into an MoU between the University and the CESS for collaboration.*

***Areas for collaboration:***

1. *Providing research inputs to KSRDPRU on policy advocacy and decision making.*
2. *Studying the existing programs of KSRDPRU and identify the gaps, provide inputs particularly in the components of skill development and management.*
3. *To identify new programs that can be introduced based on need analysis.*
4. *Promoting faculty and student participation for institutional growth and enhancing quality dimensions at all levels.*
5. *Creating internal quality assurance systems in the institution and to mentor the same.*
6. *Identifying areas for technology interface in the delivery of the programs of the university.*
7. *Creating modules for training, faculty enrichment, student support etc, delivering and evaluating them.*
8. *To conduct research/provide support on sustainable and comprehensive rural development as per the objectives of the University.*
9. *To prepare plan of action by prioritization of activities.*

10. *Work study to identify smooth and efficient flow of organizational/academic & administrative functions.*

11. *Conducting conferences, seminars, workshops etc.*

12. *Jointly work on research and other projects sanctioned by the government, government agencies, private bodies, and trusts.*

13. *Conducting student satisfaction surveys.*

14. *Accrediting the teachers and measure the teacher quotient.*

*A draft of the MoU is enclosed herewith for kind perusal.*

*The matter is placed before the Executive Council for kind consideration and approval.*

**ನಿರ್ಣಯ**

ಕುಲಪತಿಗಳು, ಶೈಕ್ಷಣಿಕ ಮತ್ತು ಸಮಾಜ ಶಾಸ್ತ್ರ ಕೇಂದ್ರ(CESS)ದ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಹಾಗೂ ಅವರೊಡನೆ ಒಡಂಬಡಿಕೆ ಮಾಡಿಕೊಳ್ಳುವುದರಿಂದ ವಿಶ್ವವಿದ್ಯಾಲಯಕ್ಕೆ ಆಗುವ ಪ್ರಯೋಜನಗಳನ್ನು ವಿವರಿಸಿದರು. ಡಾ. ಆರ್. ಎಸ್. ದೇಶಪಾಂಡೆಯವರು ಮಾತನಾಡಿ ಆರ್ಥಿಕ ಜವಾಬ್ದಾರಿಯನ್ನು ಎರಡೂ ಸಂಸ್ಥೆಗಳು ಹಂಚಿಕೊಳ್ಳುವ ಸಾಧ್ಯತೆಯನ್ನು ಪರಿಗಣಿಸುವಂತೆ ಸಲಹೆ ನೀಡಿದರು. ಕುಲಪತಿಗಳು ಉತ್ತರಿಸಿ CESS ಒಂದು ಲಾಭ ರಹಿತ ಸಂಸ್ಥೆಯಾಗಿದ್ದು ಅವರಿಗೆ ಯಾವುದೇ ಆರ್ಥಿಕ ಸಂಪನ್ಮೂಲಗಳಿರುವುದಿಲ್ಲ ಎಂದು ಸ್ಪಷ್ಟೀಕರಣ ನೀಡಿದರು. ಚರ್ಚೆಯ ನಂತರ, CESS ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಮತ್ತು ಕರಡು ಒಡಂಬಡಿಕೆ ಸ್ಮರಣಿಕೆಯನ್ನು (MoU) ಅನುಮೋದಿಸಲು ಹಾಗೂ ಅಗತ್ಯವಿದ್ದಲ್ಲಿ ಒಡಂಬಡಿಕೆ ಸ್ಮರಣಿಕೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಅಂತಿಮಗೊಳಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

The Vice Chancellor explained the academic activities of the Centre for Educational and Social Studies (CESS), Bengaluru and the benefits of collaborating with them. Dr. R.S. Deshapande suggested to explore the possibility of sharing the financial aspects between the two institutions. The Vice Chancellor clarified that the CESS is a non-profit organization without any financial resources. After discussion, the Executive Council resolved to approve the proposal of entering into MoU with CESS along with the draft MoU, and authorized the Vice Chancellor to finalize the same with suitable modification, if necessary.

B. Thimmegowda

**Subject No. 10: To consider termination of contract for the work of construction of replica of Sabaramati Ashram building in KSRDPR University Campus.**

***Reference Note:***

*Tenders were invited through e-Procurement for construction of a replica of Sabaramati Ashram building in KSRDPR University new Campus, Gadag. The lowest bidder Sri R. Srinivasa Reddy was entrusted with the work vide Work Order dated 6th February 2019 and the site was handed over to him on the same day to start construction work after entering into an agreement / contract with him. As per tender condition, the work is required to be completed within six months. But the said contractor despite several notices and oral instructions, is not executing the work as per required standards and time schedule. Therefore, a final notice was issued to him on 13th June 2019 for termination of the contract explaining the details of defaults of the contractor in terms of the contract / agreement. Since the contractor has failed to keep up his promise to construct the building as per time schedule, it is proposed to terminate the contract in the interest of the University. After termination of the contract, the work may be entrusted to KRIDL, Gadag Division or re-tendered through e-proc.*

***The details of the Tender are as under:***

*As per the construction schedule submitted, the Contractor should have completed 56.43% of the work financially as on 12/06/2019, but on site, only 14.01% of the work is completed. Following is the comparison of the construction programme submitted to its current status as of today.*

| ***Sl. No.*** | ***Item Description*** | ***As per agreed construction Schedule*** | ***Current Status*** |
|---|---|---|---|
| a | Earthwork | Completed | Completed |
| b | Column and Stone masonry | Completed | In Progress |
| c | Plinth Beam | Completed | Yet to start |
| d | Column poles and Brick masonry | Completed | Yet to start |
| e | Truss work | Completed | Yet to start |
| f | Wood work | To be in progress | Yet to start |
| g | Laying of Roofing Tiles | Yet to start | Yet to start |
| h | Completion of plastering and Finishing work | Yet to start | Yet to start |

*Based on the above observations, there is a delay of 42.42% of the work which requires 93.96 days to complete it. So, the Liquidated Damages for the delay of 93.96 days is -*

*Liquidated Damages = No. of days delayed **x** Liquidated Damage per day*
*= 93.96 **x** 7000*
*= **Rs. 6,57,720***

*The maximum Liquidated Damages is 10% of contract price*
*i.e., 0.1 x 64,99,106.6*
*= **Rs. 6,49,910.66***

*The matter was placed before the Works Committee meeting held on 25th June 2019. The Works Committee has resolved to recommend to the Executive Committee for termination of the contract and assign the work to KRIDL, as generally it is difficult to get people to take up the incomplete work.*

*The matter is placed before the Executive Council for consideration and decision.*

**ನಿರ್ಣಯ**

ಸಬರಮತಿ ಪ್ರತಿಕೃತಿ ಕಟ್ಟಡ ನಿರ್ಮಾಣಕ್ಕೆ ಶ್ರೀ ಆರ್. ಶ್ರೀನಿವಾಸ ರೆಡ್ಡಿಯವರಿಗೆ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಿ ಸದರಿ ಕಾಮಗಾರಿಯನ್ನು KRIDL ಅವರಿಗೆ ವಹಿಸಲು ಕಾಮಗಾರಿ ಸಮಿತಿ ಮಾಡಿರುವ ಶಿಫಾರಸು/ ತೀರ್ಮಾನವನ್ನು ಅನುಮೋದಿಸಲು ಹಾಗೂ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಇತರ ಸಾಧ್ಯತೆಗಳನ್ನು ಅನ್ವೇಷಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

The Executive Council resolved to approve the recommendation / decision of the Works Committee to terminate the contract with Shri R. Srinivasa Reddy for construction of replica of Sabaramati Ashram and to entrust the work to KRIDL or explore the other possibilities of getting the work completed at the earliest.

***Subject No. 11: To consider the Tender for obtaining services of the Manpower supply to KSRDPR University***

***Reference Note:***

*The tender for obtaining services of the Manpower to KSRDPR University was floated on 05.03.2019 vide tender notification: KSRDPRU/MAN POWER/01/2018-19. The necessary documents to be enclosed were specified in the tender document. The technical bids were opened on 20.06.2019 and were scrutinised in the presence of bidders. A total of 10 bidders participated in the tender process. Bids of two out of the ten bidders viz Asif Nadaf (Combat security Force and Allied Services) and Sabira Begum were rejected due to non-compliance of the tender conditions. The bids of the remaining eight bidders were accepted.*

*The financial bid was opened on 24.06.2019 and it was found that all the eight bidders quoted service charge of 2%. Thus, all the eight bidders were declared as "L1". As per the bid document, in case of a tie between two or more Tenderers at the lowest position, all the lowest Tenderers shall be asked to submit discount over their previous quoted rates in sealed envelops. In case of a tie again in lower position, the job will be awarded to the Tenderer with higher credential (highest single order value for similar type of jobs in last five years (50%) plus highest turnover in last three years (50%).*

*During the meeting, convened to finalise the agency, it was resolved that seeking discount from the bidders would not be a feasible option and hence it was resolved to award the Tender to highest single order value for similar type of jobs in the last five years (50%) plus highest turnover in last three years (50%) as per the bid document.*

*On evaluation, it was found that M/s KSF-9 corporate Services Private Limited with an average turnover of Rs.69,37,18,149/- (Rs.Sixty nine crore thirty seven lakhs eighteen thousand one hundred and forty nine only) in the past three years is the highest. Also, the highest single order value for similar type of jobs in the last five years is amounting to Rs. 12,11,63,315/- (Rs. Twelve Crores eleven lakhs sixty three thousand three hundred and fifteen only).*

*Considering the above facts, it was resolved to award the tender to M/s KSF-9 Corporate Services Private Limited.*

*The matter is placed before the Executive Council for consideration and decision.*

### ನಿರ್ಣಯ

ವಿಶ್ವವಿದ್ಯಾಲಯದಕ್ಕೆ ಮಾನವ ಶಕ್ತಿಯನ್ನು ಒದಗಿಸಲು M/s. KSF-9 ಕಾರ್ಪೊರೇಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಅವರಿಗೆ ಟೆಂಡರ್ ಗುತ್ತಿಗೆ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

### RESOLUTION

The Executive Council resolved to approve the proposal to award the tender for supply of Manpower to the University to M/s. KSF-9 Corporate Services Private Limited, Bengaluru.

**ಸಾಮಾನ್ಯ ಚರ್ಚೆ**

ಕಾರ್ಯಸೂಚಿಯನ್ನು ಪರಿಗಣಿಸಿದ ನಂತರ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

1. ಹೊಸ ಆವರಣದಲ್ಲಿ ನಿರ್ಮಾಣ ಹಂತದಲ್ಲಿರುವ ಕಾಮಗಾರಿಗಳ ಬಗ್ಗೆ ಪ್ರಸ್ತುತಪಡಿಸಲು ಕೆಂಬಾವಿ ಆರ್ಕಿಟೆಕ್ಟ್ಸ್ ಅವರ ಪ್ರತಿನಿದಿಗಳನ್ನು ಆಹ್ವಾನಿಸಲಾಯಿತು. ಪ್ರಸ್ತುತಪಡಿಸಿದ ನಂತರ, ಸದಸ್ಯರು ಮಾತನಾಡಿ ಕಾಮಗಾರಿಗಳು ಪ್ರಗತಿಯಲ್ಲಿದ್ದಾಗ ವಾಸ್ತು ಶಿಲ್ಪಿಗಳು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಗಳು ನಿರ್ದಿಷ್ಟತೆಯ ಗುಣಮಟ್ಟದೊಂದಿಗೆ ನಡೆಯುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕೆಂದು ಸೂಚಿಸಿದರು.

2. ಡಾ. ಅಬ್ದುಲ್ ಹಕೀಂ ಮತ್ತು ಶ್ರೀ ಗೋವಿಂದಪ್ಪ ಅವರು ಮಾತನಾಡಿ ವಿಶ್ವವಿದ್ಯಾಲಯ ನಡೆಸುತ್ತಿರುವ ಕೋರ್ಸುಗಳ ಬಗ್ಗೆ ಹಾಗೂ ಅವುಗಳ ಪ್ರಯೋಜನಗಳ ಬಗ್ಗೆ ಹೆಚ್ಚಿನ ಪ್ರಚಾರ ನೀಡಬೇಕೆಂದು ಸಲಹೆ ನೀಡಿದರು. ವಿಶ್ವವಿದ್ಯಾಲಯದ ಮಾಹಿತಿ ಕರಪತ್ರಗಳನ್ನು ರಾಜ್ಯದ ಎಲ್ಲಾ ಕಾಲೇಜುಗಳಿಗೆ ಕಳುಹಿಸಿ ಕಾಲೇಜುಗಳ ಸೂಚನಾ ಫಲಕಗಳಲ್ಲಿ ಪ್ರದರ್ಶನ ಮಾಡುವ ವ್ಯವಸ್ಥೆ ಮಾಡಲು ಸಲಹೆ ಇತ್ತರು. ಅಲ್ಲದೆ, ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲೂ ಹೆಚ್ಚಿನ ಪ್ರಚಾರ ನೀಡಲು ತಿಳಿಸಿದರು. ಹೊಸದಾಗಿ ಚುನಾಯಿತರಾಗುವ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತಿ ಸದಸ್ಯರುಗಳಿಗೆ ಗ್ರಾಮೀಣ ಅಭಿವೃದ್ಧಿಯ ದೃಷ್ಟಿಯಿಂದ ಮೌಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಶ್ರೀ ಗೋವಿಂದಪ್ಪ ಅವರು ಒತ್ತಾಯಿಸಿದರು. ಅವರು ಮುಂದುವರೆದು ಮಾತನಾಡಿ, ಈ ವಿಶ್ವವಿದ್ಯಾಲಯದ ಪದವೀದರರಿಗೆ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಲ್ಲಿ ಉದ್ಯೋಗ ಪಡೆಯಲು ಆದ್ಯತೆ ನೀಡಿ ಕೆಲವು ಹುದ್ದೆಗಳನ್ನು ಮೀಸಲಿಡಬೇಕೆಂಬ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಬೇಕೆಂದು ಸಲಹೆ ನೀಡಿದರು. ಕುಲಪತಿಗಳು ಮತ್ತು ಕುಲಸಚಿವರು ಉತ್ತರಿಸಿ ಈ ನಿಟ್ಟಿನಲ್ಲಿ ಈಗಾಗಲೇ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಹಾಗೂ ಮುಂದಿನ ಯೋಜನೆಗಳ ಬಗ್ಗೆ ಸ್ಪಷ್ಟೀಕರಣ ನೀಡಿದರು.
3. ಡಾ. ಜಿ. ಬಿ. ಶಿವರಾಜು ಅವರು ಮಾತನಾಡಿ ವಿಶ್ವವಿದ್ಯಾಲಯ ನಡೆಸುವ ಎಲ್ಲಾ ಕೋರ್ಸುಗಳಲ್ಲಿ ಮಾನವ ಮೌಲ್ಯಗಳು ಮತ್ತು ಮಹಾತ್ಮಾ ಗಾಂಧಿಯವರ ತತ್ವಗಳ ಕುರಿತು 100 ಅಂಕಗಳ ಒಂದು ವಿಷಯವನ್ನು ಅಳವಡಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಪರಿಶೀಲಿಸಿ ಪಠ್ಯಕ್ರಮ ತಯಾರಿಸಲು ಒಂದು ಸಣ್ಣ ಸಮಿತಿಯನ್ನು ರಚಿಸುವಂತೆ ಸಲಹೆ ನೀಡಿದರು.

ಸದಸ್ಯರು ಮತ್ತು ಅಧ್ಯಕ್ಷರಿಗೆ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

## GENERAL DISCUSSIONS:

After the Agenda was considered, the following issues were discussed:

1. The representatives of M/s. Kembavi Architects were invited to make a presentation of the ongoing construction of buildings in the new Campus. After presentation, the members asked the Architects to visit the site frequently during the execution of works to ensure compliance of specifications and also the quality.

2. Dr. Abdul Hakim and Shri Govindappa suggested to give more publicity about the courses offered in the University and the advantages of pursuing such courses. They suggested for sending University brochures to all the Degree Colleges in the State for display in their Notice Boards. They also suggested to publicize the University both in print and electronic media. Shri Govindappa

further emphasized the need for organizing value based training programmes for all the newly elected Panchayt Members of Gram Panchayats, Taluk Panchayats and Zilla Panchayts in the interest of development of villages. He also suggested for sending a proposal to the Government to earmark certain percentage of jobs for the University Graduates in the Government service in the related Departments. The Vice Chancellor and the Registrar briefed the members about the steps taken so far and planned steps in this regard.

3. Dr. G.B. Shivaraju mentioned that there is need to introduce a paper of 100 marks in the curriculum related to Human Values and Gandhian Principles in all the courses offered in the University. He suggested for constituting a small committee to examine and formulate course contents.

The meeting concluded with thanks to the Members and the Chair.

Registrar
Ex-Officio Member Secretary

Vice Chancellor
Chairperson